© 2015 JETIR April 2015, Volume 2, Issue 4 www.jetir.org (ISSN-2349-5162)

# ದೂರದರ್ಶನ ಚಂದನ ವಾಹಿನಿಯಲ್ಲಿ ಸೌಂದರ್ಯ ಮತ್ತು ಮಹಿಳೆ

ರಮೇಶ್ ಸಿ,

## ಪ್ರವೇಶ

ಸೌಂದರ್ಯ ಪ್ರಕೃತಿದತ್ತವಾದುದು ಎನ್ನುತ್ತಾರೆ ಆದರೆ ಸೌಂದರ್ಯ ನೋಡುವವರ ಮನಸ್ಸಿನ ಧೋರಣೆ ಆಲೋಚನೆಯಿಂದಾಗಿ ಅವರ ಕಣ್ಣಿಗೆ ಸೌಂದರ್ಯ ಗೋಚರವಾಗುತ್ತದೆ. ಒಂದು ಗಾದೆ ಇದೆ "ಊಟ ನಮ್ಮಿಷ್ಟ, ನೋಟ ಪರರಿಗಿಷ್ಟ" ಜಗತ್ತೇ ಸುಂದರ ಜಗತ್ತಿನಲ್ಲಿರುವುದೆಲ್ಲ ಸುಂದರ. ಆದರೆ ಎಲ್ಲರೂ ಒಪ್ಪುವಂತದ್ದು ಜಗತ್ತಿನಲ್ಲಿ ಇರಲು ಸಾಧ್ಯವಿಲ್ಲ. ಸೌಂದರ್ಯವೆಂದರೆ ಚೆಲುವು ; ಅಂದ ಎಂದು ಸೌಂದರ್ಯದ ಕುರಿತು ಸಮೂಹ ಮಾಧ್ಯಮವಾದ ಚಂದನವಾಹಿನಿ ಕಾರ್ಯಕ್ರಮದಿಂದ ತಿಳಿಯೋಣ "ಹೆಣ್ಣು ಸೌಂದರ್ಯದ ಪ್ರತೀಕ, ನಿಸರ್ಗದತ್ತವಾದ ಅವಳ ಚೆಲುವು ಋತು, ಕಾಲಮಾನ ಕಳೆದಂತೆ ಕುಂದುತ್ತಾ ಹೋಗುತ್ತದೆ. ದೈವದತ್ತವಾದ ಅವಳ ಚೆಲುವನ್ನು ಕಾಪಾಡಿಕೊಳ್ಳುವುದು ಅವಳ ಕರ್ತವ್ಯ"[1] ಈ ಹೇಳಿಕೆ ಹೆಣ್ಣನ್ನು ಸೌಂದರ್ಯವನ್ನು ಮಾಡುವತ್ತ ಗಮನ ಹರಿಸಲು ಪ್ರೇರೇಪಿಸುತ್ತದೆ. ಹೆಣ್ಣು–ಗಂಡು ಇಬ್ಬರೂ ಸಹ ಸೌಂದರ್ಯವಂತರೆ, ಗಂಡಿಗೆ ಸೌಂದರ್ಯ ಕಾಪಾಡಿಕೊಳ್ಳಬೇಕು ಎಂದು ಹೇಳುತ್ತಿಲ್ಲ.

ಕಮಲಾ ಹಂಪನಾ ಸೌಂದರ್ಯದ ಕುರಿತು ಹೀಗೆ ಹೇಳುತ್ತಾರೆ "ಗಂಡು ಹೆಣ್ಣಿನ ಸೃಷ್ಟಿಯಾದ ದಿನದಿಂದಲೇ ಅವರಿಬ್ಬರ ಪರಸ್ಪರ ಆರ್ಕಷಣೆ ಪ್ರಾರಂಭವಾಯಿತು. ಗಂಡು ತನ್ನ ಗಂಡಸುತನ, ಪೌರುಷತ್ವಕ್ಕೆ ಹೆಸರಾದಂತೆ ಹೆಣ್ಣು ತನ್ನ ಲಜ್ಜೆ, ಕೋಮಲತ್ವ, ಸೌಂದರ್ಯಕ್ಕೆ ಹೆಸರುವಾಸಿಯಾದಳು. ಹೆಣ್ಣು ಗಂಡಿನೊಂದಿಗೆ ರಹಸ್ಯದ ಬೀಡು, ಕನಸಿನ ಗೂಡು, ಆಕೆಯನ್ನು ಅನೇಕ ವಿಧಗಳಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ ಪುರುಷನಿಗೆ ಅವಳೊಂದು ಸವಾಲೇ ಆದಳು, ಮೀನಿನ ಹೆಜ್ಜೆಯನ್ನು ಗುರುತಿಸಿದ, ನಕ್ಷತ್ರಗಳನ್ನು ಎಣಿಸಿದ ಮಾನವನಿಗೆ ಹೆಣ್ಣಿನ ಮನಸ್ಸನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಕಟ್ಟಕಡೆಗೆ ಆತ ಆಕೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ ಪರಿ ಮುಖಸುತ್ತಿಯಿಂದ ಎಂದು ಆತ ಹೆಣ್ಣಿನ ಬಹಿರಂಗ ಅಂತರಂಗಗಳನ್ನು ಹೊಗಳಲು ಬಾಯಿತೆರೆದನೋ ಅಂದಿನಿಂದ ಇಂದಿನವರೆಗೂ ತನ್ನ ಬಾಯನ್ನು ಮುಚ್ಚಿಲ್ಲ ಹೆಣ್ಣಿನ ಅಂಗಾಂಗಳನ್ನು ಹೊಗಳಿ ವರ್ಣಿಸುವ ಆತ ಬಹುಶಃ ತನ್ನ ನಾಲಿಗೆಗೆ ಮುಂದೆ ಎಂದೂ ವಿರಾಮ ಕೊಡಲಾರ; ತೆಗಳಿಕೆಗೂ ಈ ಹೇಳಿಕೆ ಅನ್ವರ್ಥವಾಗಿದೆ"[2] ದೂರದರ್ಶನ ಚಂದನ ವಾಹಿನಿಯ ಕಾರ್ಯಕ್ರಮಗಳು ಇತರ ಖಾಸಗಿ ದೂರದರ್ಶನ ವಾಹಿನಿಯ ಕಾರ್ಯಕ್ರಮಗಳಿಗಿಂತ ಭಿನ್ನ ಹಾಗೂ ವೈವಿಧ್ಯಮಯ ಕಾರಣ ಇದು ಸರ್ಕಾರಿ ಸ್ವಾಮ್ಯದ ಸ್ವಯತ್ತ ಸಂಸ್ಥೆಯನ್ನುವುದೇ ಆಗಿದೆ.

ನಮ್ಮ ಕಾರ್ಯಕ್ರಮಕ್ಕೂ ಸಮೂಹ ಮಾಧ್ಯಮದ ಕಾರ್ಯಕ್ರಮಕ್ಕೂ ತುಂಬಾ ವ್ಯತ್ಯಾಸಗಳುಂಟು. ಸಮೂಹ ಮಾಧ್ಯಮಗಳ ಕಾರ್ಯಕ್ರಮಗಳು ಸಮೂಹಕ್ಕೆ ಸಂಬಂಧಿಸಿದಂತೆಯೇ ಇರುತ್ತವೆ. ಅದು ಧರ್ಮದ ಸಂಬಂಧಿ, ಕ್ರೀಡಾ ಸಂಬಂಧಿ, ಮಹಿಳಾ ಸಂಬಂಧಿ, ಮಕ್ಕಳ ಸಂಬಂಧಿ, ರಾಜಕೀಯ ಸಂಬಂಧಿ ಇತ್ಯಾದಿ. ಸಮೂಹ ಮಾಧ್ಯಮಗಳು ಅನೇಕ ಇವೆ. ಅದರಲ್ಲಿ ದೂರದರ್ಶನ ಮಾಧ್ಯಮವೂ ಒಂದು. ಇದು ದೃಕ್ ಶ್ರವಣ ಮಾಧ್ಯಮವಾದ್ದರಿಂದ ಇದರ ಕಾರ್ಯಕ್ರಮದ ರೀತಿ ನೀತಿಗಳು ಭಿನ್ನವಾಗಿರುತ್ತದೆ. ಇದರ ಮುಖ್ಯ ಉದ್ದೇಶ ದೂರದರ್ಶನ ವೀಕ್ಷಕರಿಗೆ ಸುದ್ದಿಯನ್ನು ಮುಟ್ಟಿಸುವುದು. ರೇಡಿಯೋ ಶ್ರವಣಕ್ಕೆ ಆದ್ಯತೆ ನೀಡಿ ಕೇಳುಗರನ್ನು ಗಮನದಲ್ಲಿ ಇಟ್ಟುಕೊಂಡು ಕಾರ್ಯಕ್ರಮ ನಿರೂಪಣೆ ಮಾಡುತ್ತದೆ. ಪತ್ರಿಕೆ ಓದುಗರನ್ನು ಗಮನದಲ್ಲಿ ಇಟ್ಟುಕೊಂಡು ಆಯಾ ಭಾಷಿಕರಿಗೆ ಅರ್ಥವಾಗುವ ಭಾಷೆ ಬಳಸುತ್ತದೆ. ದೂರದರ್ಶನವು ಶ್ರವಣಿಗರು–ಓದುಗರು ಎರಡೂ ವರ್ಗದವರನ್ನು ಮನದಲ್ಲಿ ಇಟ್ಟುಕೊಂಡು ವಿಷಯ ನಿರೂಪಣೆ ಮಾಡುತ್ತದೆ. ಜೊತೆಗೆ ದೃಶ್ಯದ ಮೂಲಕ ಕಾರ್ಯಕ್ರಮ ಪ್ರಸಾರ ಮಾಡುವುದರಿಂದ ಅಕ್ಷರಸ್ಥ ಅನಕ್ಷರಸ್ಥ ಎನ್ನದೆ ಎಲ್ಲಾರಿಗೂ ಆಸಕ್ತಿಯನ್ನು ಉಂಟುಮಾಡಿ ಕಾರ್ಯಕ್ರಮ ಪ್ರಸಾರ ಮಾಡುತ್ತದೆ. ಒಟ್ಟನಲ್ಲಿ ದೂರದರ್ಶನವು ಚಿತ್ರ, ಧ್ವನಿ, ದೃಶ್ಯ ಮೂರೂ ಒಟ್ಟಿಗೆ ದೊರೆಯುವ ಒಂದು ಮಾಧ್ಯಮವಾಗಿದೆ. ಇಂದು ದೂರದರ್ಶನ ಮನರಂಜನೆ ಜೊತೆಗೆ ಸೌಂದರ್ಯದ ಕುರಿತ ಮಾಹಿತಿಯನ್ನು ಅದರಲ್ಲಿಯೂ ಮಹಿಳಾ ಸೌಂದರ್ಯದ ಮಾಹಿತಿಯ ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಗಂಡು ಹೆಣ್ಣನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಹೆಣ್ಣಿನ ಅಂಗಾಂಗ ಸೌಂದರ್ಯವನ್ನು ಹೊಗಳಿದ್ದಾನೆ ಅಷ್ಟೆ. ಆದರೆ ಹೆಣ್ಣು ಅಂದುಕೊಂಡಳು ನಾವು ಗಂಡಿಗಿಂತ ಚೆಂದ ಇದ್ದೇವೆ ಎಂದು ನಿಜ ಹೇಳಬೇಕೆಂದರೆ ಹೆಣ್ಣಿಗೆ ಗಂಡು ಚೆಂದ, ಗಂಡಿಗೆ ಹೆಣ್ಣು ಚೆಂದ. ಉದಾಹರಣೆಗೆ ಅಕ್ಕಮಹಾದೇವಿ

"ಪುರುಷನ ಮುಂದೆ ಮಾಯೆ

ಸ್ತ್ರೀಯೆಂಬ ಅಭೀಮಾನವಾಗಿ ಕಾಡುವುದು

ಸ್ತ್ರೀಯ ಮುಂದೆ ಮಾಯೆ

ಪುರುಷನೆಂಬ ಅಭಿಮಾನವಾಗಿ ಕಾಡುವುದು"

ಎನ್ನುತ್ತಾ ಶರಣ ಚಾರಿತ್ರ್ಯದ ಬಗ್ಗೆ ತಿಳಿಸುತ್ತಾರೆ. ಇಲ್ಲಿ ಮಾಯೆ ಎನ್ನುವುದನ್ನು ಸೌಂದರ್ಯ/ಆಕರ್ಷಣೆ ಎಂಬ ಹಿನ್ನೆಲೆಯಲ್ಲಿ ಮಾತ್ರ ಬಳಸಿದ್ದೇನೆ. ಹಾಗಾಗಿ ಗಂಡು–ಹೆಣ್ಣು ಸಾಮಾನ ಸೌಂದರ್ಯ ಉಳ್ಳವರು ಹಾಗಾಗಿ ಹೆಣ್ಣು–ಗಂಡಿಗೆ ಪರಸ್ಪರ ಮಾಹೆಯೇ. "ಸೌಂದರ್ಯದಲ್ಲಂತೂ ನೀನೇ ಇಂದ್ರಾಣಿ, ರಂಬೆ, ಊರ್ವಶಿ, ತಿಲೋತ್ತಮೆ, ಮೇನಕೆ ಎಂದೂ ವರ್ಣಿಸಿ ವರ್ಣಿಸಿ ಮೈ ಮರೆತ ಗಂಡು ಒಂದು ಕಡೆ, ಅದನ್ನು ನಿಜವೆಂದು ನಂಬಿ ಈ ಭ್ರಾಮಕ ಪ್ರಪಂಚದಲ್ಲಿ ತನ್ನ ಅಸ್ತಿತ್ವವನ್ನೇ ಮರೆತ ಹೆಣ್ಣು ಇನ್ನೊಂದು ಕಡೆ"[3] **ಕೃಷಿಯಲ್ಲಿ ಶಿಕ್ಷಣದ ಸವಾಲುಗಳು**

ಹೆಣ್ಣಿಗೆ ಸೌಂದರ್ಯವನ್ನು ಕಾಪಾಡಿಕೊಳ್ಳುವುದು ಅವಳ ಕರ್ತವ್ಯ ಎನ್ನುವುದೇ ಸ್ತ್ರೀ ವಿರೋಧಿ ನಿಲುವು. ಗಂಡಾಗಲಿ ಹೆಣ್ಣಾಗಲಿ ಸ್ವಚ್ಛತೆ ಕಾರಣಕ್ಕಾಗಿ ಸ್ನಾನ ಮಾಡುವುದು, ತಲೆ ಬಾಚಿಕೊಳ್ಳುವುದು, ಹಲ್ಲು ಉಜ್ಜುವುದು, ಶುಭ್ರ ಬಟ್ಟೆ ಧರಿಸುವುದು ಯಾರಿಗೂ ತೊಂದರೆ ಇಲ್ಲ, ಆರೋಗ್ಯವಾಗಿರಲು ಉತ್ತಮ. ಆದರೆ ಪುರುಷನಿಗಾಗಿ ನಾನು ಚೆಂದ ಕಾಣಬೇಕು ಎಂಬ ನಿಲುವಿನಿಂದ ಹೆಣ್ಣಿನ ಸೌಂದರ್ಯ ಪ್ರಜ್ಞೆ ಹೊರಟಂತಿರುವುದು ಹೆಣ್ಣಿಗೆ ತನ್ನ ಅಸ್ತಿತ್ವವನ್ನೇ ಕಳೆದು ಕೊಳ್ಳುವಂತಾಗುತ್ತದೆ ಎಂಬುದು ತಿಳಿಯುತ್ತಿಲ್ಲ. ಹೆಣ್ಣನ್ನು ಯಾವ ರೀತಿ ಪುರುಷ ಪ್ರಧಾನ ನಿಲುವುಗಳು ನೋಡುತ್ತಿವೆ. ಎಂಬುದನ್ನು ಈ ಮಾತುಗಳನ್ನು ನೋಡಿದರೆ ಗೊತ್ತಾಗುತ್ತದೆ "ಅಮೇರಿಕದ ಪ್ರತಿಭಾನ್ವಿತ ಹಾಗೂ ಅಂತರರಾಷ್ಟ್ರೀಯ ಪ್ರಸಿದ್ಧಿ ಪಡೆದ ನಟಿಯೋರ್ವಳು, ಸಾಂಪ್ರದಾಯಿಕ ಔತಣಕೂಟವೊಂದರಲ್ಲಿ ತನ್ನ ಚೆಲುವು, ಒನಪು ವೈಯ್ಯಾರ, ಚತುರೋಕ್ತಿಗಳಿಂದ ಅತಿಥಿಗಳ ಮನಸ್ಸನ್ನು ಸೂರೆಗೊಂಡಳು.ಆಕೆ ತನ್ನ ಮಾತಿನ ಮೋಡಿಯಿಂದ ತನ್ನ ಎಡಬದಿಗೆ ಕುಳಿತಿದ್ದ ಆಫ್ರಿಕಾದ ಮುಖ್ಯಸ್ಥರ ವಿಶ್ವಾಸ ಗಳಿಸುವಲ್ಲಿ ಸಫಲಳಾದಳು, ಔತಣಕೂಟದ ಕೊನೆಯಲ್ಲಿ ಈ ಮುಖ್ಯಸ್ಥ ಆಕೆಗೆ ಈ ರೀತಿ ಹೇಳಿದರು "ನೀನೇನಾದರೂ ಸ್ವಲ್ಪ ದಪ್ಪ ಹಾಗೂ ಕಪ್ಪು ಸುಂದರಿಯಾಗಿದ್ದರೆ ನಾನು ಸುಲಭವಾಗಿ ನಿನ್ನ ಪ್ರೇಮ ಪಾಶದಲ್ಲಿ ಬೀಳುತ್ತಿದೆ" [4]

ಸೌಂದರ್ಯವನ್ನು ಕಾಲ, ದೇಶ, ಸಂಸ್ಕೃತಿ ಹಿನ್ನೆಲೆಯಲ್ಲಿ ತೆಳ್ಳಗೆ, ದಪ್ಪಗೆ,ಕಪ್ಪು ಬಿಳಿ ಹೀಗೆ ಇರುತ್ತದೆ. ಇಲ್ಲಿ ಮುಖ್ಯವಾಗುವುದು ಪುರುಷನನ್ನು ತನ್ನ ಪ್ರೇಮ ಪಾಶದಲ್ಲಿ ಬೀಳಿಸಲು ತೆಳ್ಳಗಿರುವ ಹೆಣ್ಣು ದಪ್ಪ ಆಗಬೇಕು, ಬಿಳಿ ಇರುವ ಹೆಣ್ಣು ಕಪ್ಪು ಆಗಬೇಕು, ಯಾಕೆ ಹೀಗೆ ಸ್ತ್ರೀಯನ್ನು ತನ್ನ ಪ್ರೇಮ ಪಾಶದಲ್ಲಿ ಬೀಳಿಸಲು ಪುರುಷನೇ ಬದಲಾಗಬಹುದಲ್ಲ. ಆದರೆ ಆಗದು ಕಾರಣ ಪುರುಷವಾದಿ ಧೋರಣೆಗಳೇ ಹಾಗೆ ಹೆಣ್ಣು ತನಗೆ ತಕ್ಕಂತೆ ಇರಬೇಕು ಎಂಬುದು. ಈ ವಾಹಿನಿಯಲ್ಲಿ ಚೆಲುವಿಗೆ ಚಿತ್ತಾರ ಎಂಬ ಕಾರ್ಯಕ್ರಮ ಸೌಂದರ್ಯದ ಕುರಿತು ಮೂಡಿ ಬರುವಂತಹದ್ದು ಇದರಲ್ಲಿ ಗಂಡು ಹೆಣ್ಣು ಇಬ್ಬರ ಸೌಂದರ್ಯದ ಬಗ್ಗೆ ಕಾರ್ಯಕ್ರಮ ಮೂಡಿಬರುತ್ತದೆ. ಆದರೆ ಪುರುಷರಿಗೆ ಸಂಬಂಧಿಯಾಗಿ ಬೆರಳೆಣಿಕೆಯಷ್ಟು ಸಂಚಿಕೆ ಪ್ರಸಾರವಾಗುತ್ತಿವೆ. ಹೇರ್ ಕಟಿಂಗ್ ಮತ್ತು ಗಡ್ಡ ಸಟಿಂಗ್ ಅಷ್ಟೇ. ಆದರೆ ಹೆಣ್ಣಿಗೆ ಹತ್ತು ಹಲವು ಸೌಂದರ್ಯ ವೃದ್ಧಿಯ ಬಗ್ಗೆ ಪ್ರಸಾರವಾಗುತ್ತದೆ. ಈ ಕಾರ್ಯಕ್ರಮ ಮಹಿಳೆಯರ ಸೌಂದರ್ಯದ ಜೊತೆಗೆ ಅರಿವನ್ನು ಮೂಡಿಸುವ ಕಾರ್ಯಕ್ರಮ ಎಂದು ಹೇಳುವುದರ ಮೂಲಕ ಪ್ರಸಾರ ಮಾಡಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಒಂದೊಂದು ಸಂಚಿಕೆಯಲ್ಲಿಯೂ ಒಂದೊಂದು ವಿಷಯದೊಂದಿಗೆ ಮೂಡಿಬರುತ್ತದೆ. ಎಲ್ಲಾ ವಿಷಯಗಳು ಹೆಣ್ಣಿಗೆ ಸಂಬಂಧಿಸಿದಂತೆ ಉದಾಹರಣೆಗೆ ಹಲ್ಲಿನ ಬಗ್ಗೆ, ಪುಟಾಣಿಗಳ ಉಡುಪುಗಳು, ಮಹಿಳೆಯರಿಗೆ ಫಿಟ್‌ನೆಸ್ ಮಂತ್ರ, ಜಡೆ ಹಾಕುವುದರ ಬಗ್ಗೆ, ಸೀರೆ ಬಗ್ಗೆ, ಏರ್‌ಬ್ರಶ್ ಮೇಕಪ್, ಮಹಿಳೆಯ ಬ್ಯಾಗ್, ಕೈಯಲ್ಲಿ ಅರಳಿದ ಕಸೂತಿ ಆಭರಣಗಳು, ಆಭರಣಗಳ ವಿನ್ಯಾಸ, ಫಿಟ್‌ನೆಸ್ (ಜಿಮ್), ಬಿಳಿ ಕೂದಲು, ಫಿಶ್ ಪೆಟಿಕ್ಯೂರ್, ಅಲೋವೆರಾ ಮತ್ತು ಪುದೀನ ಪೇಶಿಯಲ್, ಸ್ಪೈರಲ್ ಅಂಡ್ ಆ್ಯಂಟಿ ಏಜಿಂಗ್ ಫೇಶಿಯಲ್ಸ್, ಚಂದದ ಮಕ್ಕಳಿಗೆ ಮುದ್ದಿನ ಅಲಂಕಾರ ಪಾರ್ಟಿವೇರ್, ಇವೆಲ್ಲ ಮಹಿಳೆ ದೇಹ ಸೌಂದರ್ಯ ಮತ್ತು ಮನೆ ಹಾಗೂ ಮಕ್ಕಳ ಸೌಂದರ್ಯ ಕಾಳಜಿ ಕುರಿತು, ಪುರುಷರಿಗೆ ಹೇರ್‌ಕಟ್, ಫೇಶಿಯಲ್ಸ್ ಮಾತ್ರ, ಈ ಕಾರ್ಯಕ್ರಮದಲ್ಲಿನ ಮಹಿಳಾ ಪ್ರತಿನಿಧೀಕರಣವು ಸ್ತ್ರೀ ವಾದದ ಪ್ರಕಾರ ನಕಾರಾತ್ಮಕ ಪ್ರತಿನಿಧೀಕರಣವಾಗಿದೆ.

ಈ ರೀತಿಯಾಗಿ ಈ ವಾಹಿನಿಯಲ್ಲಿ ಮಹಿಳೆಯರಿಗೆ ಸೌಂದರ್ಯದ ಜೊತೆಗೆ ಅರಿವನ್ನು ಮೂಡಿಸುವ ಕಾರ್ಯಕ್ರಮ ಎನ್ನುತ್ತಾ ಮಹಿಳಾ ಪ್ರತಿನಿಧೀಕರಣವನ್ನು ಮಾಡುತ್ತಿದ್ದಾರೆ. ಆದರೆ ಹೆಣ್ಣು–ಹೆಣ್ಣಗಳಲ್ಲಿ ಸ್ಪರ್ಧೆ ಉಂಟುಮಾಡುತ್ತಿದೆ. ಹೆಣ್ಣಾಗಲಿ ಗಂಡಾಗಲಿ ಚೆಂದವಾಗಿಯೇ ಇದ್ದಾರೆ. ಆದರೆ ಇದರ ಅರಿವು ಇಲ್ಲದಂತಾಗಿ ಈ ರೀತಿ ಸೌಂದರ್ಯದ ಬಗ್ಗೆ ವಿಪರೀತ ಕಾಳಜಿ ಉಂಟಾಗಿದೆ ಅಷ್ಟೆ. ಈ ಕಾರ್ಯಕ್ರಮದಲ್ಲಿ ಮಹಿಳಾ ಪ್ರತಿನಿಧೀಕರಣವು ಸ್ತ್ರೀವಾದ ಪ್ರಕಾರ ನಕಾರಾತ್ಮಕ ಮಹಿಳಾ ಪ್ರತಿನಿಧೀಕರಣವಾಗಿದೆ. ಕ್ಯಾಂಪಸ್ ಕನೆಕ್ಟ್

ಎಂಬ ಕಾರ್ಯಕ್ರಮದಲ್ಲಿ ಕಾಲೇಜುಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಯನ್ನು ಪ್ರಸಾರ ಮಾಡುತ್ತಾರೆ. ಅಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಫ್ಯಾಷನ್ ಶೋ ಮಾಡುತ್ತಾರೆ. ಇದು ಅದೇ. ಈ ವಾಹಿನಿ ಅವರಿಗೆ ಈ ರೀತಿ ಹೇಳುವುದಿಲ್ಲ. ವಿದ್ಯಾರ್ಥಿ ಸಮೂಹವೇ ಆ ರೀತಿ ಸೌಂದರ್ಯಕ್ಕೆ ಒತ್ತು ನೀಡುತ್ತಿದ್ದಾರೆ. ಈ ವಾಹಿನಿಯೂ ಈ ರೀತಿ ಕಾರ್ಯಕ್ರಮದ ಮೂಲಕ ಪ್ರಸಾರ ಮಾಡಿದೆ ಎಂದಷ್ಟೇ ಇಲ್ಲಿ ಪ್ರಸ್ತಾಪಿಸಲಾಗಿದೆ. ಈ ವಾಹಿನಿಯ ಎಲ್ಲ ಕಾರ್ಯಕ್ರಮಗಳಲ್ಲಿ ನಿರೂಪಣೆಯಲ್ಲಿ ವಸ್ತ್ರ ಸಂಹಿತೆ ಇರುವಂತಿದೆ. ಹೆಚ್ಚಾಗಿ ಮಹಿಳೆಯರು ಸೀರೆ, ಸರ, ಬಳೆ, ಮತ್ತು ಕೆಲವು ಕಾರ್ಯಕ್ರಮಗಳಲ್ಲಿ ಚೂಡಿ, ಇನ್ನೂ ಕೆಲವು ಕಾರ್ಯಕ್ರಮಗಳಲ್ಲಿ ಆಧುನಿಕ ಉಡುಗೆ, ತೊಡುಗೆ ಧರಿಸಲಾಗುತ್ತಿದೆ, ಆದರೆ ಅಶ್ಲೀಲವಾಗಿರುವುದಿಲ್ಲ. ಒಟ್ಟಿನಲ್ಲಿ ಸೌಂದರ್ಯ ಮತ್ತು ಮಹಿಳೆಯ ಸಂಬಂಧವಾಗಿ ಅಧಿಕೃತವಾಗಿ ಚೆಲುವಿಗೆ ಚಿತ್ತಾರದಲ್ಲಿ ಪ್ರಸಾರ ಮಾಡುತ್ತಿದೆ. ಈ ಕಾರ್ಯಕ್ರಮದಲ್ಲಿ ಮಹಿಳಾ ಸೌಂದರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. **ಅಧಿಕಾರಿಗಳ ಮೋಸದ ಜಾಲದಲ್ಲಿ ಕೃಷಿಕ:** ಕೃಷಿಕರ ಸಂಸ್ಕೃತಿಯೊಳಗಡೆ ಅಧಿಕಾರಿಗಳು ಶಿಕ್ಷಣವೆಂಬ ಬುದ್ಧಿವಂತಿಕೆ ಪ್ರಯೋಗ ಮಾಡುವರು. ಆ ಪ್ರಯೋಗ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಬುದ್ಧಿವಂತರ ಜಾಲವೆಂದು ಕೃಷಿಕ ಅರಿಯದೇ ಹೋದ. ಅಧಿಕಾರಿಗಳ ಸ್ವಾರ್ಥ, ಭೂಮಿಯ ಮೇಲಿನ ವ್ಯಾಮೋಹದಿಂದ ಕೃಷಿಕರನ್ನು, ಅವರ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲು ಕೃಷಿಕರ ಮುಗ್ಧತೆಯನ್ನು ಧಾಳವಾಗಿ ಬಳಸಿಕೊಳ್ಳುತ್ತಾರೆ. ಇದು ಶಿಕ್ಷಣ ಕಲಿತವರ, ಶ್ರೀಮಂತರ ದುರುಪಯೋಗ ಪದ್ಧತಿ ಬೆಳೆದಿದೆ. ಈ ವ್ಯವಸ್ಥೆ ಅಮರೇಶ ನುಗಡೋಣಿಯವರ "ಬೇಟೆ" ಕಥೆಯಲ್ಲಿ ಅಭಿವ್ಯಕ್ತಗೊಂಡಿವೆ. "ಮಲ್ಲಿಹಳ್ಳಿ"ಯಲ್ಲಿ ಅಧ್ಯಕ್ಷರ ಆಪ್ತ ಎಂದು "ಪರಶುರಾಮ" ಅನ್ನುವವನು, "ಲಚುಮಿನ್ನ" ಮುಂದೆ ನಿದ್ರಿಸಿಕೊಂಡು ಮಿರಿಮಿರಿ ನೋಡುತ್ತಾ 'ನಿನ್ಗ ಪಂಚಾಯಿತಿ ಆಫೀಸಿನ್ಯಾಗ ಕೆಲ್ಸಕೊಡುಸ್ತೀನಿ 'ಎಂದು ಮಾತಿನ ಮೋಡಿಯಲ್ಲಿ ವಂಚಿಸಿ ಅವನ ಆಶಯವನ್ನು ಅನುಭವಿಸುವುದು. ಅವಳನ್ನು ನೋಡುವ ದೃಷ್ಟಿಕೋನ ಹಸಿದ ಹುಲಿಯ ಆರ್ಭಟದಂತೆ, ಆಹಾರ ಸಿಕ್ಕಾಗಲೇ ಬಿಸಿ ರಕ್ತ ಹೀರಿ ಬಿಡಬೇಕೆನ್ನುವ ಸ್ವಾರ್ಥ. ಅವಳ ಮೇಲಿನ ಆಸೆ ಮತ್ತು ತನ್ನ ತೃಷೆಯ ಹಸಿವಿನ ದಾಹ ತೀರಿಸಿಕೊಳ್ಳಲು ತನ್ನತ್ತ ಸೆಳೆಯುವ ಮಾತಿನ ಜಾಣ್ಮೆ. ಇನ್ನೊಬ್ಬ "ನಿಂಗಪ್ಪ" ಎಂಬುವವನು "ನಿನ್ನ ಹೊಲದ ಮ್ಯಾಗ ಅಧ್ಯಕ್ಷರಿಗೂ ಮೊದ್ಲೇ ಕಣ್ಣಿತ್ತು! ಅದು ನಮ್ಗಗೊತ್ತಿದ್ದಿಲ್ಲ. ಆ ಹೊಲವನ್ನು ನಿನ್ನಿಂದ ಪಡಕೊಂಡು ಅಲ್ಲಿ ಅಧ್ಯಕ್ಷರೂ ರೈಸುಮಿಲ್ಲು ಹಾಕ್ತರಂತ. ಅ ಮಿಲ್ಲಿನಲ್ಲಿ ನಿಮ್ಗೆಲ್ಲ ಕೆಲಸ ಕೊಡುಸ್ತಾರಂತ" ಎಂದು ಹೇಳುವ ವಿಧಾನದ ಒಂದು ಬಗೆ. ಅಲ್ಲಿ ಬುದ್ಧಿವಂತರು ಜಾಣ್ಮೆಯಿಂದ ಪರಶಿವಯ್ಯ ಮತ್ತು ಗಂಗವ್ವ ದಂಪತಿಗಳ ಭೂಮಿಯನ್ನು ಕಿತ್ತುಕೊಳ್ಳುವುದು ವಂಚನೆಯ ಪ್ರತಿಕಾರ. ಆ ಭೂಮಿಯಲ್ಲಿ ಅಧಿಕಾರಿಗಳು ಕೈಗಾರಿಕೆ, ಕಾರ್ಖಾನೆಗಳನ್ನು ಕಟ್ಟುವುದು. ಆ ಕೈಗಾರಿಕೆಯಲ್ಲಿ ಕೆಲಸ ಕೊಡುವ ನೆಪದಲ್ಲಿ ಕೃಷಿಕರನ್ನು ಬೀದಿಗೆ ತಳ್ಳುವುದು. ಅದರಲ್ಲಿ ಕೆಲಸ ಮಾಡುವ ಸ್ತ್ರೀಯರನ್ನು ತಮ್ಮ ಸುಖದ ತೀಟೆಗಾಗಿ ಬಳಸಿಕೊಂಡು ಕಬ್ಬಿನ ಸಿಪ್ಪೆಯಂತೆ ತಿಪ್ಪೆಗೆ ಹಾಕುವುದು. ಇಷ್ಟೆಲ್ಲಾ ದೌರ್ಜನ್ಯಕ್ಕೆ ಕಾರಣ ಕೃಷಿಕರಲ್ಲಿ ಶಿಕ್ಷಣದ ಕೊರತೆ. ಇನ್ನೊಂದು ಕಡೆ ಶಿಕ್ಷಣ ಕಲಿತವರು ನಿರುದ್ಯೋಗದ ಸಮಸ್ಯೆ ಅನುಭವಿಸುವಂತದ್ದು. ಇವೆಲ್ಲವುಗಳಿಗೆ ಮೂಲ ಆರ್ಥಿಕ ಬಿಕ್ಕಟ್ಟು. ಕೃಷಿಕರ ಬದುಕಿನ ಜೀವಾಳ ಕೃಷಿ, ಕಾಯಕ ಭೂಮಿ, ಭೂಮಿಯನ್ನೆ ಕಿತ್ತುಕೊಳ್ಳುವ ಸ್ವಾರ್ಥಿಗಳ ಸಮಾಜ ನಮ್ಮನಾಡು. ಈ ಕೃಷಿ ಕಾಯಕದಲ್ಲಿ ಹುಟ್ಟಿದ "ಸಂಜೀವ" "ಯಕ್ಕ ನಾನು ಹೈಸ್ಕೂಲಿಗೆ ಹೋಗ್ತೀನಿ. ನಿನ್ಗ ಈಗ ಸಾಲಿಗೆ ಸೇರಾಕ ಬರದಿಲ್ಲೇನು" ಎಂಬ ಆಸಕ್ತಿ. "ನನ್ಗ ಓದಬೇಕಂದ್ರ ಬಾಳ ಆಸೆ. ಲಿಂಗದಳ್ಯಾಗ ಸಾಲಿಗೆ ಸೇರ್ಲಿಲ್ಲ. ಸೇರಿದ್ರೂ ಹೈಸ್ಕೂಲಿಲ್ಲ" ಈ ಸಮಸ್ಯೆಗಳೇ ಹೆಚ್ಚಾಗಿ ಕಲಿಯುವವರಿಗೆ ಸವಾಲಾಗಿ ಎದುರುಗೊಳ್ಳುತ್ತವೆ. ಇವುಗಳನ್ನು ಎದುರಿಸಿ ನಿಲ್ಲಬೇಕೆಂದರೆ ಆರ್ಥಿಕ ಬಲಹೀನತೆ. ಶ್ರೀಮಂತರ ದರ್ಪ, ಅಧಿಕಾರಿಗಳ ದೌರ್ಜನ್ಯ ಕೃಷಿಕರು ಹಿಂದುಳಿಯಲು ತಡೆಗೋಡೆಕಟ್ಟಿದೆ. ಈ ತಡೆಗೋಡೆ ಕೆಡವಿ ಮುನ್ನುಗ್ಗುವ ಛಲ ಕೃಷಿಕರಲ್ಲಿ ಹುಟ್ಟಬೇಕು. ಗೆಲ್ಲಬೇಕಾದರೆ ಅವರಲ್ಲಿನ ದೌರ್ಬಲ್ಯವನ್ನು ಕಿತ್ತು; ಶಿಕ್ಷಣವನ್ನು ಶಕ್ತಿಯಾಗಿ ಬಳಸಬೇಕು. ಕೃಷಿಕರ ಮನಸ್ಸನ್ನು ಹೊಡೆಯುವ, ದುಷ್ಟರ ದೇಹದ ರಕ್ತವನ್ನು ಚಾಮುಂಡಿಯೇ ಹೀರಿ ಹೊರ ಜಗತ್ತಿಗೆ ತೋರಿಸಿದಂತೆ. ಬುದ್ಧಿವಂತ ಜೀವಿಗಳ ಮಂಡು ತನವು ಗಾಳಕ್ಕೆ ಸಿಲುಕಿದ ಮೀನಿನಂತೆ, ಬಲೆಯೊಳಗೆ ಬೀಳಿಸಿಕೊಳ್ಳುವ ಕಲೆ ನಿನ್ನದು. ಕೃಷಿಕನಾದವನು ಅದೆ ಗಾಳಕ್ಕೆ ಸಿಲುಕದೆ ಸೂಕ್ಷ್ಮವಾಗಿ ಗಮನಿಸುವುದು, ಬಂಡುಕೋರರನ್ನೆ ಸ್ಪರ್ಶಿಸಿದಂತೆ. ಆ ಮರ್ಮದ ಪೊರೆಯ ಮೌಢ್ಯತೆಯಿಂದ ಹೊರಬಂದು ವಿಶಾಲ ಜಗತ್ತಿನ ಸವಿಯನ್ನುಣ್ಣುವುದು. ಇದನ್ನು ಮರೆಯದೆ ಶಿಕ್ಷಣದ ಕಲಿಕೆಗಾಗಿ ತನ್ನನ್ನು ಪಣವಾಗಿಡುವುದು. ಇನ್ನೊಬ್ಬರ ಹಂಗಲ್ಲಿ ಬದುಕದೆ ಸ್ವಾಯತ್ತ ಬದುಕಿಗಾಗಿ, ಶಿಕ್ಷಣದ ಕಲಿಕೆಗಾಗಿ ಇಡೀ ಬದುಕನ್ನೇ ಮುಡುಪಾಗಿಡುವುದು. ಈ ವ್ಯವಸ್ಥೆಯಲ್ಲಿನ ಸಮಸ್ಯೆಯನ್ನು; ಬಗೆಹರಿಸಬೇಕಾದರೆ ಶಿಕ್ಷಣವನ್ನು ಶೈಕ್ಷಣಿಕ ಸವಾಲಾಗಿ ಕೃಷಿಕರು ಸ್ವೀಕರಿಸುವುದು. ನುಸುಳುಕೋರರಾದ ಭೂಒಡೆಯರ ದೌರ್ಜನ್ಯಕ್ಕೆ ಎದರದೆ, ಇಟ್ಟ ಹೆಜ್ಜೆಯನ್ನು ಹಿಂದೆ ಇಡಲರಿಯದು. ಎದುರಿಸುವ ಶಕ್ತಿ ತನ್ನೊಳಗೆ ಅಡಗಿದೆ. ಒಮ್ಮೆ ಹೊರಹೊಮ್ಮಿ ಧೈರ್ಯಕ್ಕೆ ಎದೆಕೊಟ್ಟು ನಿಲ್ಲಬೇಕು. ಆಗ ನಿನ್ನಲ್ಲಿರುವ ಎಡ್ಡತನದ ಸೂಕ್ಷ್ಮತೆ ಅರ್ಥವಾಗುತ್ತದೆ.

**ಕೊನೆ ಟಿಪ್ಪಣಿ**


1 ಸೌಂದರ್ಯ ಸಂಕಿರಣ. ಉಷಾ ನವರತ್ನರಾವ್. ಪು. ಮುನ್ನುಡಿ (2013)

2 ಕನ್ನಡ ಸಂಸ್ಕೃತಿ. ಕಮಲಾ ಹಂಪನಾ(ಲೇಖನ:ದೇವದಾಸಿ–ಧರ್ಮ–ದೇವರು), ಡಾ. ಜೆ.ಎಂ ನಾಗಯ್ಯ(ಪ್ರ.ಸಂ). ಪು.97 (2016)

3 ಅದೇ ಪು.97–98

4 ಬ್ಯೂಟಿ ಸೌಂದರ್ಯ ಕೈಪಿಡಿ. ಮೂಲ: ಆರ್ಲೆನ್ ಮ್ಯಾಥ್ಯು. ಪು.ಮುನ್ನುಡಿ (2015)